F-28

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: **'M/s Parrys Sugar Industries Ltd.'** ಹೆಸರನ್ನು **'M/s EID Parry (India) Ltd.'** ಎಂದು ಬದಲಾಯಿಸಿಕೊಂಡಿರುವ ಕ್ರಮಕ್ಕೆ ಸಮ್ಮತಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ :ಇಎನ್ 327 ಎನ್‌ಸಿಇ 2012, ದಿ : 24.01.2013.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ : ಕೆ.ಆರ್.ಇ.ಡಿ.ಎಲ್/03/F-38/2017/5497 ದಿ : 04.08.2017.

No. 4428
Date 7/12/17

* * *

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದ ಮೂಲಕ ಮೆ: ಶ್ರೀ ಧನಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತದ ಗುತ್ತಿಗೆದಾರ ಕಂಪನಿಯಾದ ಮೆ: ಜಿ.ಎಂ.ಆರ್. ಇಂಡಸ್ಟ್ರೀಸ್ ಲಿಮಿಟೆಡ್‌ನ ಹೆಸರನ್ನು ಮೆ: ಪ್ಯಾರೀಸ್ ಶುಗರ್ ಇಂಡಸ್ಟ್ರೀಸ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ ಸದರಿ ಕಂಪನಿಯು ಗುತ್ತಿಗೆ ಪಡೆದಿರುವ ಸಕ್ಕರೆ ಕಾರ್ಖಾನೆಯ ಸಹ ವಿದ್ಯುತ್ ಘಟಕದ ಸಾಮರ್ಥ್ಯವನ್ನು 12 ಮೆ.ವ್ಯಾ ಗಳಿಂದ 13 ಮೆ.ವ್ಯಾ ಗಳಿಗೆ ಹೆಚ್ಚಿಸಲು ಅನುಮೋದನೆಯನ್ನು ನೀಡಲಾಗಿರುತ್ತದೆ.

GM (Tech) I/c KREDL

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದ ಮೂಲಕ ಕರ್ನಾಟಕ ನವೀಕರಿಸಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಸದರಿ ಕಂಪನಿಯವರು ತಮ್ಮ ಕಂಪನಿಯ ಹೆಸರನ್ನು **'M/s Parrys Sugar Industries Ltd'** ನಿಂದ **'M/s EID Parry (India) Ltd.'** ಎಂದು ಬದಲಾಯಿಸಿಕೊಂಡಿರುವ ಬಗ್ಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಿರುವುದಾಗಿ ತಿಳಿಸಿ, ಸದರಿ ಹೆಸರು ಬದಲಾಯಿಸಿಕೊಂಡಿರುವ ಕ್ರಮಕ್ಕೆ ಸರ್ಕಾರದ ಸಮ್ಮತಿಯನ್ನು ಕೋರಿ, ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ 13 ಮೆ.ವ್ಯಾ. ಸಾಮರ್ಥ್ಯದ ಸಹ–ವಿದ್ಯುತ್ ಯೋಜನೆಯ ಘಟಕವನ್ನು ಹೊಂದಿರುವ **"M/s Parrys Sugar Industries Ltd.,"** ಎಂಬ ಕಂಪನಿಯ ಹೆಸರನ್ನು **"M/s EID Parry (India) Ltd.,"** ಎಂದು ಬದಲಾಯಿಸಿಕೊಂಡಿರುವ ಕ್ರಮಕ್ಕೆ ಸರ್ಕಾರದ ಸಮ್ಮತಿಯನ್ನು ಸೂಚಿಸಿ ಆದೇಶವನ್ನು ಹೊರಡಿಸಬಹುದೆಂಬ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

- ಮೆ: ಪ್ಯಾರೀಸ್ ಶುಗರ್ ಇಂಡಸ್ಟ್ರೀಸ್ ಲಿಮಿಟೆಡ್ ರವರ ಕಂಪನಿಯ ಹೆಸರು ಬದಲಾವಣೆ ಕೋರಿಕೆ;
- ಮಾನ್ಯ NCLT Bangalore & NCLT Chennai ರವರ ಆದೇಶ ಪತ್ರಗಳು;
- Ministry of Corporate Affairs ಸಂಸ್ಥೆಯವರಿಂದ ಅನುಮೋದನೆ ಪಡೆದಿರುವ ಹೆಸರು ಬದಲಾಣೆಗೆ ಸಂಬಂಧಪಟ್ಟ ದಾಖಲಾತಿಗಳು;

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿರುವಂತೆ ಮಾನ್ಯ NCLT Bangalore & NCLT Chennai ರವರ ಆದೇಶ ಪತ್ರಗಳನ್ವಯ **'M/s Parrys Sugar Industries Ltd'** ಕಂಪನಿಯು **'M/s EID Parry (India) Ltd.'** ಜೊತೆಗೆ ವಿಲೀನಗೊಂಡಿದ್ದು, ಸದರಿ ಕಂಪನಿಯ ಹೆಸರನ್ನು **'M/s EID Parry (India) Ltd.'** ಎಂದು ಬದಲಾಯಿಸಿಕೊಂಡಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 394 ಎನ್‌ಸಿಇ 2017**
**ಬೆಂಗಳೂರು, ದಿನಾಂಕ: 05.12.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ **'M/s Parrys Sugar Industries Ltd'** ಕಂಪನಿಯ ಹೆಸರನ್ನು **'M/s EID Parry (India) Ltd.'** ಎಂದು ಬದಲಾಯಿಸಿಕೊಂಡಿರುವ ಕ್ರಮಕ್ಕೆ ಸರ್ಕಾರವು ಸಮ್ಮತಿಸಿದೆ.

ಈ ಆದೇಶವನ್ನು ರದ್ದು ಮಾಡುವ / ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

**ಇವರಿಗೆ:**
ಸಂಕಲನಕಾರರು, ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು–1.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ಜಿಲ್ಲೆ, ಬೆಳಗಾವಿ.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ.82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು–9.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
7. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ.
8. ~~ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ.~~
9. 'M/s Parrys Sugar Industries Ltd' Venus Building, 3rd Floor, 1/2 Kalyanamantapa Road, Jakkasandra, Koramangala Bengaluru-560 034.
10. 'M/s EID Parry (India) Ltd.' Venus Building, 3rd Floor, 1/2 Kalyanamantapa Road, Jakkasandra, Koramangala Bengaluru-560 034.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
12. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13. ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.